ಆಕೆಯ ಕುಟುಂಬದವರೆಲ್ಲ ಒಲಿಂಪಿಕ್ ವಿಜೇತರಾದುದರಿಂದ ಮರಣದಂಡನೆ ವಿಧಿಸದೆ ಎಚ್ಚರಿಕೆ ನೀಡಿ ಬಿಟ್ಟರಂತೆ.

ಒಲಿಂಪಿಕ್ ಕ್ರೀಡೆಗಳು ನಡೆಯುವ ಸಮಯದಲ್ಲಿ ರಾಜ್ಯಗಳ, ರಾಷ್ಟ್ರಗಳ ನಡುವಿನ ದ್ವೇಷ ಸಾಧನೆಗೂ ಅವಕಾಶವಿರಲಿಲ್ಲ. ಈಗಿನ ಗ್ರೀಸ್ ದೇಶದಂತೆ ಆಗಿನ ಗ್ರೀಸ್ ಒಂದೇ ರಾಷ್ಟ್ರವಾಗಿರಲಿಲ್ಲ. ಒಂದೊಂದು ಪ್ರದೇಶ ಪ್ರತ್ಯೇಕ ರಾಜ್ಯಗಳಂತೆ ಅವುಗಳದೇ ರಾಜರು, ಸಾಮಂತರನ್ನು ಹೊಂದಿತ್ತು ಹಾಗೂ ಅವರು ಪರಸ್ಪರ ಕಚ್ಚಾಡುತ್ತ, ಯುದ್ಧಗಳನ್ನು ನಡೆಸುತ್ತಿದ್ದರು. ಒಲಿಂಪಿಕ್ ಸಮಯವನ್ನು ಘೋಷಿಸುತ್ತಿದ್ದಂತೆ ಕ್ರೀಡೆಗಳು ಮುಗಿಯುವವರೆಗೆ ಎಲ್ಲರೂ ಯುದ್ಧ ನಿಲ್ಲಿಸಬೇಕಿತ್ತು. ಏಕೆಂದರೆ ಎಲ್ಲ ರಾಜ್ಯ, ರಾಷ್ಟ್ರಗಳಿಂದ ಕ್ರೀಡಾಪಟುಗಳು, ಆಸಕ್ತರು, ಕೋಚ್‌ಗಳು, ರೆಫರಿಗಳು ಎಲ್ಲರೂ ಸುರಕ್ಷಿತವಾಗಿ ಒಲಿಂಪಿಯಾ ತಲುಪಬೇಕಿತ್ತು.

ಅಷ್ಟೇ ಅಲ್ಲ, ಆಯಾ ರಾಷ್ಟ್ರಗಳಲ್ಲಿ ಯಾರಿಗಾದರೂ ಅಪರಾಧಿಗಳಿಗೆ ಮರಣದಂಡನೆ ವಿಧಿಸಿದ್ದರೆ ಅದನ್ನು ಸಹ ಕ್ರೀಡೆಗಳು ಮುಗಿಯುವವರೆಗೆ ಮುಂದೂಡಬೇಕಿತ್ತು. ಕ್ರಿ.ಪೂ. 420ರಲ್ಲಿ ಸ್ಪಾರ್ಟನ್ನರು ಕ್ರೀಡೆಗಳನ್ನು ಘೋಷಿಸಿದ್ದರೂ ಯುದ್ಧ ನಿಲ್ಲಿಸದೇ ಇದ್ದುದರಿಂದ ಅವರಿಗೆ ಎರಡು ಲಕ್ಷ ಡ್ರಾಚ್ಮಾಗಳ ದಂಡ ವಿಧಿಸಿದ್ದರಂತೆ. ಮತ್ತೊಮ್ಮೆ ಅಲೆಕ್ಸಾಂಡರನ ತಂದೆ ಎರಡನೇ ಫಿಲಿಪ್ಪನ ಸೈನಿಕರು ಒಲಿಂಪಿಕ್ ಕ್ರೀಡೆಗಳನ್ನು ವೀಕ್ಷಿಸಲು ಹೊರಟಿದ್ದ ಪ್ರಯಾಣಿಕರನ್ನು ದರೋಡೆ ಮಾಡಿದ್ದರಿಂದ ಆ ಸೈನಿಕ–ಕಳ್ಳರ ರಾಜನಾದ ಎರಡನೇ ಫಿಲಿಪ್ಪನಿಗೆ ದಂಡ ವಿಧಿಸಿದ್ದರಂತೆ.

ಕ್ರಿ.ಪೂ. 7ನೇ ಶತಮಾನದಲ್ಲಿ ಪ್ರಾರಂಭವಾದ ಒಲಿಂಪಿಕ್ ಕ್ರೀಡೆಗಳು ಸಾವಿರಕ್ಕೂ ಹೆಚ್ಚು ವರ್ಷಗಳು (ಕ್ರಿ.ಪೂ. 776ರಿಂದ ಕ್ರಿ.ಶ. 393), ರೋಮನ್ನರು ನಿಲ್ಲಿಸುವವರೆಗೂ ಒಲಿಂಪಿಯಾಡ್‌ನಂತೆ (ಗ್ರೀಕರ ಪ್ರಕಾರ ಒಲಿಂಪಿಯಾಡ್ ಎಂದರೆ ಎರಡು ಒಲಿಂಪಿಕ್ ಕ್ರೀಡೆಗಳ ನಡುವಿನ ನಾಲ್ಕು ವರ್ಷಗಳ ಅವಧಿ) ಗ್ರೀಕ್ ನಾಗರಿಕತೆಯ, ಉತ್ಕೃಷ್ಟತೆಯ, ಸಾಮುದಾಯಿಕ ಗ್ರೀಕ್ ನಾಗರಿಕತೆಯ ಮತ್ತು ಸಂಸ್ಕೃತಿಯ ಅಭಿವ್ಯಕ್ತಿಯಂತೆ ನಡೆದವು.

ಗ್ರೀಕರು ತಾವು ರಾಜಕೀಯವಾಗಿ ಪರಸ್ಪರ ಎಷ್ಟೇ ವೈಮನಸ್ಯ ಹೊಂದಿದ್ದರೂ ಅವರ ಸಾಂಸ್ಕೃತಿಕ ಏಕತೆಯ ರೂಪವಾಗಿದ್ದದ್ದು ಒಲಿಂಪಿಕ್ ಕ್ರೀಡೆಗಳು. ಒಲಿಂಪಿಕ್ ಕ್ರೀಡೆಗಳ ಉಗಮ ಸ್ಥಳ ಒಲಿಂಪಿಯಾ, ಗ್ರೀಕರ ಮಹಾನ್ ಹಾಗೂ ದೇವರದೇವನಾದ ಜ್ಯೂಸ್‌ನ ಪವಿತ್ರ ಸ್ಥಳ. ಹಾಗಾಗಿ ಒಲಿಂಪಿಕ್ ಕ್ರೀಡೆಗಳು ಪವಿತ್ರವಾದುವು. ಗ್ರೀಕರಿಗೆ ದೇವರು ಎಂಬುದು ಭಕ್ತಿ ಮತ್ತು ಶ್ರದ್ಧೆಗಿಂತ, ಬದುಕಿನ ರೀತಿ ಹಾಗೂ ನಡವಳಿಕೆಗಳಾಗಿದ್ದವು. ಪ್ರಾಚೀನ ಒಲಿಂಪಿಕ್ ಕ್ರೀಡೆಗಳಿಗೆ ಅವುಗಳದೇ ಚಾರಿತ್ರಿಕ ಹಾಗೂ ಪೌರಾಣಿಕ ಕಥೆಗಳಿವೆ. ಅವುಗಳ ಹಿನ್ನೆಲೆ ಹಾಗೂ ನಡೆದುಬಂದ ಹಾದಿಯನ್ನು ನೋಡೋಣ.

## ನದಿಗಳ ನಡುವಿನ ಕಣಿವೆಯಲ್ಲಿ...



ಜ್ಯೂಸ್‌ನ ಮಂದಿರಕ್ಕೂ ಹಳೆಯದಾದ, ಆತನ ಪತ್ನಿ ಹೇರಾಳ ಮಂದಿರದ ಅವಶೇಷಗಳು. ಇಂದಿಗೂ ಹೇರಾಳ ಮಂದಿರದ ಮುಂಭಾಗ ಆಧುನಿಕ ಒಲಿಂಪಿಕ್ ಕ್ರೀಡೆಗಳಿಗಾಗಿ ಸೂರ್ಯನ ಕಿರಣಗಳಿಂದ 'ಪ್ಯಾರಾಬೊಲಾಯ್ಡ್' ಕನ್ನಡಿ ಬಳಸಿ ಒಲಿಂಪಿಕ್ ಜ್ವಾಲೆ ಹೊತ್ತಿಸಿ ಒಲಿಂಪಿಯಾದಿಂದ ಒಲಿಂಪಿಕ್ ಕ್ರೀಡೆಗಳು ನಡೆಯುವ ಸ್ಥಳಕ್ಕೆ ಸಾಗಿಸಲಾಗುತ್ತದೆ. ಒಳಚಿತ್ರ: 2020ರ ಟೋಕಿಯೊ ಒಲಿಂಪಿಕ್‌ಗಾಗಿ ಮಂದಿರದ ಮುಂದೆ ಒಲಿಂಪಿಕ್ ಜ್ವಾಲೆ ಹೊತ್ತಿಸುತ್ತಿರುವುದು.

ಒಲಿಂಪಿಯಾ ಇರುವುದು ಗ್ರೀಸ್ ದೇಶದ ದಕ್ಷಿಣದಲ್ಲಿನ ಪೆಲೊಪೊನ್ನೆಸಸ್ ಪ್ರದೇಶದ ಎರಡು ನದಿಗಳ (ಆಲ್ಫಿಯಸ್ ಮತ್ತು ಅದರ ಉಪನದಿ ಕ್ಲಾಡಿಯಸ್) ನಡುವಿನ ಫಲವತ್ತಾದ ಕಣಿವೆಯಲ್ಲಿ. ಅಲ್ಲಿಂದ ಕೆಲವೇ ಕಿಲೋ ಮೀಟರ್‌ಗಳ ದೂರದಲ್ಲಿ ಅಯೋನಿಯನ್ ಸಾಗರವಿದೆ. ಆ ಕಣಿವೆಯ ಒಂದು ಬಗಲಿಗೆ ಕ್ರೋನೋಸ್ ಪರ್ವತವಿದೆ. ಗ್ರೀಕ್ ಪುರಾಣದಲ್ಲಿ ದೇವತೆಗಳ ಅಧಿಪತಿಯಾದ ಜ್ಯೂಸ್‌ನ ತಂದೆಯ ಹೆಸರೂ ಕ್ರೋನೋಸ್. ಒಂದು ಐತಿಹ್ಯದಂತೆ ದೇವರುಗಳ ರಾಜ ಯಾರಾಗಬೇಕು ಎಂದು ತೀರ್ಮಾನಿಸುವ ಮಲ್ಲಯುದ್ಧ, ತಂದೆ ಕ್ರೋನೋಸ್ ಹಾಗೂ ಮಗ ಜ್ಯೂಸ್ ನಡುವೆ ಒಲಿಂಪಿಯಾದಲ್ಲಿ ನಡೆಯಿತು ಹಾಗೂ ಆ ಮಲ್ಲಯುದ್ಧವೇ ಒಲಿಂಪಿಕ್ ಕ್ರೀಡೆಗಳಿಗೆ ನಾಂದಿ ಹಾಡಿತು ಎನ್ನುತ್ತಾರೆ. ಜ್ಯೂಸ್ ಮತ್ತು ಆತನ ಸಹೋದರರ ನಡುವೆ ಓಟದ ಸ್ಪರ್ಧೆ ಸಹ ಏರ್ಪಡಿಸಲಾಯಿತಂತೆ. ಈ ರೀತಿಯ ಸಾಂಪ್ರದಾಯಿಕ ಹಾಗೂ ಧಾರ್ಮಿಕ ಸ್ಪರ್ಧೆಗಳ ತಾಣವಾಯಿತು ಒಲಿಂಪಿಯಾ.

ಮತ್ತೊಂದು ದಂತಕತೆಯ ಪ್ರಕಾರ, ಪಶ್ಚಿಮ ಅರ್ಕಾಡಿಯಾದ ರಾಜ ಎನೊಮಾಸ್ ತನ್ನ ಸುಂದರ ಮಗಳಾದ ಹಿಪ್ಪೊಡೇಮಿಯಳನ್ನು ವರಿಸಲು ಬರುವವರಿಗೆ ಕುದುರೆ ರಥದ ಸ್ಪರ್ಧೆ ಏರ್ಪಡಿಸುತ್ತಿದ್ದನಂತೆ. ಅದರಲ್ಲಿ ತನ್ನನ್ನು ಸೋಲಿಸಿದವರಿಗೆ ಮಾತ್ರ ತನ್ನ ಮಗಳನ್ನು ಕೊಡುವುದಾಗಿ ಹೇಳುತ್ತಿದ್ದ. ರಾಜ ಎನೊಮಾಸ್‌ನನ್ನು ಸ್ಪರ್ಧೆಯಲ್ಲಿ ಸೋಲಿಸುವಂಥವರು ಯಾರೂ ಇರಲಿಲ್ಲ. ಸೋತವರನ್ನು ಕೊಂದು ಅವರ ತಲೆಬುರುಡೆಗಳನ್ನು ತನ್ನ ಅರಮನೆಯ ಸುತ್ತ ತೂಗು ಹಾಕುತ್ತಿದ್ದನಂತೆ.

ಪೆಲೋಪ್ಸ್ ಎನ್ನುವ ಯುವಕನೊಬ್ಬ ರಥ ಸಿದ್ಧಪಡಿಸುವವರಿಗೆ ಲಂಚ ಕೊಟ್ಟು ರಾಜ ಎನೊಮಾಸ್‌ನ ರಥದ ಚಕ್ರಗಳಿಗೆ ಲೋಹದ ಕೀಲುಗಣೆಗಳ ಬದಲು ಮಣ್ಣಿನ ಕೀಲುಗಣೆಗಳನ್ನು ಇರಿಸುವಂತೆ ಮಾಡಿ ಮೋಸದಿಂದ ಗೆಲ್ಲುತ್ತಾನೆ ಹಾಗೂ ರಾಜನ ರಥ ಚೂರುಚೂರಾಗಿ ಸಾಯುತ್ತಾನೆ. ಕಥೆಯ ಮತ್ತೊಂದು ಆವೃತ್ತಿಯಂತೆ, ಪೆಲೋಪ್ಸ್ ಮೋಸದಿಂದ ಗೆಲ್ಲುವುದಿಲ್ಲ, ಬದಲಿಗೆ ಅವನನ್ನು ಇಷ್ಟಪಡುವ ದೇವರಾದ ಪೊಸೈಡಾನ್ ಅವನಿಗೆ ರೆಕ್ಕೆಗಳ ಕುದುರೆಗಳನ್ನು ನೀಡಿ ಸ್ಪರ್ಧೆಯಲ್ಲಿ ಗೆಲ್ಲುವಂತೆ ಮಾಡುತ್ತಾನೆ.

ಮೊಟ್ಟಮೊದಲ ಕ್ರೀಡಾ ಸ್ಪರ್ಧೆ